WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಡಿಸೆಂಬರ್ ೧, ೨೦೧೧ (ಮಾರ್ಗಶಿರ ೧೦, ಶಕ ವರ್ಷ ೧೯೩೩)	ಸಂಚಿಕೆ ೪೭

ಭಾಗ – ೩

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

IN THE COURT OF DISTRICT AND SESSIONS JUDGE, AT CHICKBALLAPUR

Sub : Recruitment of Candidates for 06 Posts of Stenographers – reg.

Read : Letter No.LCA-II/36/03 dated 23.06.2011 & 24.10.2011 of Hon'ble High Court of Karnataka, Bangalore to fill up 06 Posts of Stenographers in this unit.

NOTIFICATION No.3/2011, Dated : 05/11/2011

LAST DATE FOR RECEIPT OF APPLICATIONS IS 19.12.2011

Applications in prescribed Proforma available in this office are invited from eligible candidates, who are qualified as on the last date fixed for receipt of the applications for appointment to the Posts of Stenographers in the Unit of District and Sessions Court, Chickballapur. The details of Vacancies & reservation are classified as under:-

Sl. No	Name of the Post	No. of Vacancies	Reserved For	Classification								
				GM	S.C.	S.T.	Cat-I	II-A	II-B	III-A	III-B	TOTAL
1	2	3	4	5	6	7	8	9	10	11	12	13
01	STENOGRAPHERS	06	Women	02	--	--	--	--	--	--	--	02
			Ex-serviceman	01	--	--	--	--	--	--	--	01
			Physically handicapped	--	--	--	--	--	--	--	--	--
			Project affected	--	--	--	--	--	--	--	--	--
			Rural	--	01	--	--	--	--	--	--	01
			Kannada Medium	--	--	--	--	--	--	--	--	--
			Others	--	--	--	--	01	01	--	--	02
			TOTAL	**03**	**01**	**--**	**--**	**01**	**01**	**--**	**--**	**06**

I. **MINIMUM QUALIFICATION FOR THE POST OF STENOGRAPHER :-**

The candidates must have passed SSLC or equivalent examination.

1) The candidates must have passed Senior Typewriting and Senior Shorthand both in Kannada and English language conducted by the Department of Public Instructions of the Karnataka Secondary Examination board or possess an Equivalent Qualification.

Scale of Pay Rs.7275-175-7800-200-8600-225-9500-250-10500-300-12300-350-13350 with admissible allowances.

II. AGE LIMIT :

The candidates must have attained the age of 18 years as on the last date fixed for filing applications and must have not attained the age of :

1) 40 years in case of persons belonging to SC/ST and Category-I.

2) 38 years in case of persons belonging to any of the category-IIA, or II-B or III-A or III-B of other backward Classes and

3) 35 years in case of others as on last date fixed for submission of his/her application.

4) Candidates claiming the :benefit of reservation Categories should furnish the certificate/s in the prescribed Form & such Certificate/s should have :been issued by the competent authority. The candidates should note that, if on verification, certificate is found to be false, the candidates who made such false claim will be prosecuted in accordance with the relevant provision of Indian Penal Code and such candidates will also forfeit their claims for such selection.

III. PHYSICALLY HANDICAPPED / EX-SERVICEMEN / WIDOWS :-

Eligible candidates in the Ex-Servicemen category, eligible candidates with :blindness or low vision, widows and physically handicapped can apply.

If sufficient number of eligible candidates in Ex-Servicemen, Physically Handicapped and Widows, Rural Candidates are not available to the extent of percentage, the unfilled vacancy shall be filled up by such candidate :belonging to same category respectively.

IV. METHOD OF RECRUITMENT :

The Selection of Candidates shall be made in accordance with the provisions contemplated in the Karnataka Sub-Ordinate Courts (Ministerial and other Posts) (Recruitment) (Amendment) Rules 2007.

The Test will be conducted for the post of Stenographers. The candidates must have to appear :before the District and Sessions Judge in the premises of District Court, Chickballapur at their own costs.

V. The Qualifying test for selection of the Stenographer.

(1) A dictation at the rate of 120 words per minute shall be given for a duration of about five minutes and candidate shall transcribe the notes within forty five minutes.

(2) The number of candidates for the post of Stenographer to be included in such a list of eligible candidates shall be equal to 25 times to total number of vacancies notified.

VI. PROBATION :

Candidates will be appointed on probation for a period of two years and the provisions of KCS (Probation) Rules 1977 shall MUTATIS MUTANDIS apply to candidates so selected. During the probation the candidates shall pass the Kannada Language Examination and Departmental Examinations prescribed to the post under the K.C.S.(Kannada Language Examination) Rules 1974.

VII. APPLICANTS WHEN CALLED FOR INTERVIEWS MUST APPEAR AT THEIR OWN EXPENSES.

The Candidates should submit their Applications, complete in all aspects, together with copies of all the testimonials attested by the candidates in support of their age, qualification caste and income in the prescribed form issued by the competent authority so as to reach the District and Sessions Judge, Chickballapur on or :before **19.12.2011.** Envelope containing the application should be superscribed as **"Application for the Selection to the Post of Stenographer."**

1) The In-service candidates shall submit their applications through proper channel.

2) Defective/Incomplete/applications are liable to be rejected.

3) The candidates who attempt to obtain extraneous support for his/her candidature shall not beeligible for selection.

VIII. APPLICATION IN THE PRESCRIBED PROFORMA SHOULD BE FILLED IN BY THE CANDIDATES IN THEIR OWN HANDWRITING AND MUST BE ACCOMPANIED BY THE FOLLOWING TESTIMONIALS:

1) Copies of Marks Cards attested by the candidates.

2) The Candidates claiming the :benefit for reservations under SC/ST Category-I/II-A/II-B/III-A/III-B shall produce a certificate in the form prescribed by the Government issued by the Competent Authority.

3) The Persons claiming reservations under the quota of Rural and Kannada Medium shall produce certificates issued by the competent authority.

4) Three Certificate of good character, one from the Principal of College/Head Master/Head Mistress or Institution in which he/she had last studied and two from respectable persons unconnected with him/her testifying to his/her character.

5) Copy of SSLC/TC in support of age proof attested by the candidates.

6) Citizenship certificate (where the candidate is not a citizen of Indian by birth) issued by the DC/District Magistrate of the District in which the candidate is residing.

7) One pass port size photo of candidate shall be affixed on the application from with self-attestation.

8) Applicants to produce self addressed envelope with required prescribed postal stamps of Rs.5/- for intimation regarding interview.

9) Any application received after the due date and incomplete application will not beentertained.

10) If he or she does not get intimation for the interview it shall be presumed that he/she is not eligible for the interview. No correspondence will be entertained there after if any of the Candidate is not called for the interview.

11) The number of vacancies on the classification as noted above is subject to variation.

12) The candidates shall obtain the prescribed Application Forms in person at free of cost at the District & Sessions Court, Chickballapur during office hours.

13) The candidates shall also obtain the Application Form from this Office through post by submitting requisition along with self addressed envelope cover of 4 x 10" with necessary postal stamps.

14) The Application Forms obtained from any other source and xerox Form of the applications submitted to this Office will be rejected.

Place : Chickballapur

Dated : 05.11.2011.

B.G.JATTENNAVAR,
District & Sessions Judge,
Chickballapur

:APPLICATION FORM :

APPLICATION FOR THE POST OF "STENOGRAPHER"

Space for
Pasting Photo

To:
The Hon'ble District and Sessions Judge,
Chickballapur.

Sir,

In response to Notification No.Adm.03/011 Dated: 05.11.2011, I am submitting my application for the post of "**STENOGRAPHER**" with the following particulars.

01	Name of the applicant in full (in Block letters)			
02	Name of his/her father or mother or husband			
03	Date of Birth			
04	Residential Address of the applicant			
05	Address for communication			
06	QUALIFICATIONS: (With reference to posts as the case may be)	Month & year of passing	Maximum Marks	Marks obtained
	a) SSLC or equivalent examination			
	b) Senior English & Kannada Typing			
	c) Senior English & Kannada Shorthand			
07	a).Candidate's Religion, Caste or Community. b) Whether the candidate belongs to : SC/ST/Cat-I, II-A, II-B, III-A, III-B or under any other reserved category. (A copy of the certificate in support of the claims should be enclosed)			
08	Whether the applicant is an Indian Citizen, if not, what is his/her nationality (enclose the relevant Certificate)			
09	Whether the applicant is married/ unmarried if married do you have more than one spouse living			

10	Whether you have been prosecuted for any offence.	
11	Profession of Father & Mother with their Annual Income	
12	Whether the applicant has enrolled his name in the employment, if enrolled furnish the copy of employment card.	
13	Whether the relatives of the applicants are Government Servants? If Yes furnish the particulars.	
14	Do you belong to Ex-Serviceman, if yes then attach attested copy of the Certificate in support of your claim.	
15	Do you belong to Physically Handicapped if yes mention the category of disability.	
16	Candidates claiming reservation under Rural Quota shall produce certificate in support of the claim issued by the competent authority.	

I hereby solemnly declare that all the information and particulars given above are true to the best of my knowledge and belief and in the event of any information being found false/incorrect any stage my candidature is liable to cancelled.

Place:

Date: **Signature of Applicant**

ವರ್ಗೀಕರಣ

ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

ಶೀಘ್ರಲಿಪಿಗಾರರ ಹುದ್ದೆಗಳ ಸಂಖ್ಯೆ : **06**

ಪ್ರಾರಂಭಿಕ ಬಿಂದು : **07** ಅಂತಿಮ ಬಿಂದು : **12**

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ.ಜಾ	–	–	01	–	–	–	–	**01**
ಪ.ಪಂ	–	–	–	–	–	–	–	–
ಪ್ರವರ್ಗ–1	–	–	–	–	–	–	–	–
ಪ್ರ–2(ಎ)	01	–	–	–	–	–	–	**01**
ಪ್ರ–2(ಬಿ)	01	–	–	–	–	–	–	**01**
ಪ್ರ–3(ಎ)	–	–	–	–	–	–	–	–
ಪ್ರ–3(ಬಿ)	–	–	–	–	–	–	–	–
ಸಾ.ಅ	–	02	–	01	–	–	–	**03**
ಒಟ್ಟು	02	02	01	01	–	–	–	**06**

ಬಿ.ಜಿ. ಜಟ್ಟಣ್ಣವರ್,

ಪಿ.ಆರ್. 322 ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಚಿಕ್ಕಮಗಳೂರು

ಅಧಿಸೂಚನೆ ಸಂಖ್ಯೆ: ADMN–04/2011 ದಿನಾಂಕ:03–11–2011

ವಿಷಯ:– ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಬೆರಳಚ್ಚು ನಕಲುಗಾರರು, ಜಾರಿಕಾರರು ಹಾಗೂ ಸೇವಕರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ಉಲ್ಲೇಖ:– 1. ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA–36/2003, ದಿನಾಂಕ: 23–06–2011.

2. ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 54/2011, ದಿನಾಂಕ: 01–10–2011.

ಮೇಲ್ಕಂಡ ಉಲ್ಲೇಖಗಳ ಅನ್ವಯ ಗೌರವಾನ್ವಿತ ಉಚ್ಚ ನ್ಯಾಯಾಲಯದವರು, (7+1=8) ಶೀಘ್ರಲಿಪಿಗಾರರು, 11–ಬೆರಳಚ್ಚುಗಾರರು, 7–ಬೆರಳಚ್ಚು ನಕಲುಗಾರರು, 2–ಜಾರಿಕಾರರು, ಮತ್ತು 5–ಸೇವಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿರುತ್ತಾರೆ.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 03–12–2011 ಸಂಜೆ 5–00** ಗಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ:– ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಮೇಲ್ಕಂಡ ಅಧಿಸೂಚನೆಯ ಅನ್ವಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಬೆರಳಚ್ಚು ನಕಲುಗಾರರು, ಆದೇಶ ಜಾರಿಕಾರರು, ಮತ್ತು ಸೇವಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿಪಡಿಸಿದ ಅರ್ಜಿ ನಮೂನೆಯ ಬೆರಳಚ್ಚು ಪ್ರತಿ/ಗಣಕೀಕೃತ ಪ್ರತಿಯಲ್ಲಿಯೇ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಬೇಕು.

ಹುದ್ದೆಗಳ ವರ್ಗೀಕರಣ

ಕ್ರ. ಸಂ	ಹುದ್ದೆಯ ಹೆಸರು	ಹುದ್ದೆ ಸಂಖ್ಯೆ	ವರ್ಗೀಕರಣ	ಮೀಸಲಾತಿ							
				ಸಾ.ಅ	ಪ.ಜಾ.	ಪ.ಪಂ.	ಪ್ರ.–1	II-ಎ	II-ಬಿ	III-ಎ	III–ಬಿ
1	ಶೀಘ್ರಲಿಪಿಗಾರರು	8	ಹಿಂಬಾಕಿ ಹುದ್ದೆ	–	–	1	–	–	–	–	–
		(1 +3+4)	ಕ.ಮಾ.ಅ.	1	–	–	–	–	–	–	–
			ಮಹಿಳೆ	1	–	–	1	1	–	–	–
			ಗ್ರಾಮೀಣ	1	1	–	–	–	–	–	–
			ಯೋ.ನಿ.ಅ.	1	–	–	–	–	–	–	–
2	ಬೆರಳಚ್ಚುಗಾರರು	11	ಇತರೆ	–	1	–	–	1	–	–	–
			ಗ್ರಾಮೀಣ	2	–	1	–	–	–	1	1
			ಕ.ಮಾ.ಅ.	1	–	–	–	–	–	–	–
			ಮಹಿಳೆ	1	1	–	–	–	–	–	–
			ಯೋ.ನಿ.ಅ.	1	–	–	–	–	–	–	–
3	ಬೆರಳಚ್ಚು ನಕಲುಗಾರರು	7	ಗ್ರಾಮೀಣ	1	1	–	–	–	–	–	–
			ಮಹಿಳೆ	2	–	–	1	–	1	–	–
			ಯೋ.ನಿ.ಅ.	1	–	–	–	–	–	–	–
4	ಅದೇಶ ಜಾರಿಕಾರರು	2	ಗ್ರಾಮೀಣ	–	–	–	–	1	–	–	–
			ಅಂಗವಿಕಲ	1	–	–	–	–	–	–	–
5	ಸೇವಕರು	5	ಇತರೆ		–	–	–	–	1	–	–
			ಮಹಿಳೆ	1	1	–	–	1	–	–	–
			ಗ್ರಾಮೀಣ	1	–	–	–	–	–	–	–
	ಒಟ್ಟು	33		16	5	2	2	4	2	1	1

ವಿದ್ಯಾರ್ಹತೆ::

ಶೀಘ್ರಲಿಪಿಗಾರರು	ಬೆರಳಚ್ಚುಗಾರರು
1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಮತ್ತು ಆಂಗ್ಲ ಪ್ರೌಢದರ್ಜೆ (Senior Grade) ಶೀಘ್ರಲಿಪಿ ಹಾಗೂ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪ್ರೌಢದರ್ಜೆ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.	1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪ್ರೌಢದರ್ಜೆ (Senior Grade) ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
ಬೆರಳಚ್ಚು ನಕಲುಗಾರರು	**ಜಾರಿಕಾರರು**
1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಮತ್ತು ಆಂಗ್ಲ ಕಿರಿಯದರ್ಜೆ (Junior Grade) ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.	1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 2. ವಾಹನ ಚಾಲನಾ ಪರವಾನಗಿಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
ಸೇವಕರು	
1. 7ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 2. ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು.	

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಸಂಕ್ಷಿಪ್ತ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.

ಸಾ.ಅ. – ಸಾಮಾನ್ಯ ಅಭ್ಯರ್ಥಿ	ಪ.ಜಾ. – ಪರಿಶಿಷ್ಟ ಜಾತಿ
ಪ.ಪಂ. – ಪರಿಶಿಷ್ಟ ಪಂಗಡ	ಪ್ರ.1 – ಪ್ರವರ್ಗ 1
ಮ.ಅ. – ಮಹಿಳಾ ಅಭ್ಯರ್ಥಿ	ಗ್ರಾ.ಅ. – ಗ್ರಾಮೀಣ ಅಭ್ಯರ್ಥಿ
ಕ.ಮಾ.ಅ. – ಕನ್ನಡ ಮಾಧ್ಯಮ ಅಭ್ಯರ್ಥಿ	ಅಂ.ಅ. – ಅಂಗವಿಕಲ ಅಭ್ಯರ್ಥಿ
ಮಾ.ಸೈ.ಅ. – ಮಾಜಿ ಸೈನಿಕ ಅಭ್ಯರ್ಥಿ	ಯೋ.ನಿ.ಅ. – ಯೋಜನಾ ನಿರಾಶ್ರಿತ ಅಭ್ಯರ್ಥಿ

ವಯೋಮಿತಿ (ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಕ್ಕೆ ಅನುಗುಣವಾಗಿ)

ಕನಿಷ್ಠ ವಯೋಮಿತಿ : 18 ವರ್ಷ

ಗರಿಷ್ಠ ವಯೋಮಿತಿ : ಸಾಮಾನ್ಯ ವರ್ಗ – 35 ವರ್ಷ

2ಎ /2ಬಿ /3ಎ /3ಬಿ – 38 ವರ್ಷ

ಪ.ಜಾ/ಪ.ಪಂ/ಪ್ರವರ್ಗ – 40 ವರ್ಷ

ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

ವೇತನ ಶ್ರೇಣಿ :

ಶೀಘ್ರಲಿಪಿಗಾರರು : 7275–175–7800–200–8600–225–9500–250–10500–300–12300–350–13350 ಮತ್ತು ಇತರೆ ಭತ್ಯೆಗಳು.

ಬೆರಳಚ್ಚುಗಾರರು ಹಾಗೂ ಬೆರಳಚ್ಚು ನಕಲುಗಾರರು : 5800–100–6000–125–6500–150–7100–175–7800–200–8600–225–9500–250–10500 ಮತ್ತು ಇತರೆ ಭತ್ಯೆಗಳು.

ಜಾರಿಕಾರರು : 5200–100–6000–125–6500–150–7100–175–7800–200–8200 ಮತ್ತು ಇತರೆ ಭತ್ಯೆಗಳು.

ಸೇವಕರು : 4800–100–6000–125–6500–150–7100–175–7275 ಮತ್ತು ಇತರೆ ಭತ್ಯೆಗಳು.

ಆಯ್ಕೆ ವಿಧಾನ:

ಕರ್ನಾಟಕ ಅಧೀನ ನ್ಯಾಯಾಲಯಗಳು (ಮಿನಿಸ್ಟ್ರಿಯಲ್ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007 ರ ಅನ್ವಯ ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡಲಾಗುವುದು.

1. ಶೀಘ್ರಲಿಪಿಗಾರರು:

ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು ನಿಮಿಷ 1ಕ್ಕೆ 120 ಪದಗಳ ದರದಲ್ಲಿ 5 ನಿಮಿಷಗಳ ಉಕ್ತಲೇಖನವನ್ನು ತೆಗೆದುಕೊಂಡು ಉಕ್ತಲೇಖನವನ್ನು 40 ನಿಮಿಷಗಳಲ್ಲಿ ಅನುಲಿಪಿ ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. 1 ಹುದ್ದೆಗೆ 5 ಅಭ್ಯರ್ಥಿಗಳಂತೆ ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. (1:5 ರ ಅನುಪಾತದಲ್ಲಿ)

ಟಿಪ್ಪಣಿ : ಅರ್ಹತಾ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳನ್ನು ಪಡೆದಿದ್ದು ಅದರಲ್ಲಿ ತೇರ್ಗಡೆಯಾಗಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಮತ್ತು ಸಂದರ್ಶನವು 5 ಅಂಕಗಳನ್ನು ಒಳಗೊಂಡಿರುತ್ತದೆ.

2. ಬೆರಳಚ್ಚುಗಾರರು/ ಬೆರಳಚ್ಚು ನಕಲುಗಾರರು:

ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು 15 ನಿಮಿಷಗಳ ಉಕ್ತಲೇಖನದಲ್ಲಿ ಕೊಡುವ ವಿಷಯವನ್ನು ಬೆರಳಚ್ಚು ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. 1 ಹುದ್ದೆಗೆ 5 ಅಭ್ಯರ್ಥಿಗಳಂತೆ ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. (1:5 ರ ಅನುಪಾತದಲ್ಲಿ)

ಟಿಪ್ಪಣಿ: ಅರ್ಹತಾ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳನ್ನು ಒಳಗೊಂಡಿದ್ದು, ಅದರಲ್ಲಿ ತೇರ್ಗಡೆಯಾಗಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಮತ್ತು ಸಂದರ್ಶನವು 5 ಅಂಕಗಳನ್ನು ಒಳಗೊಂಡಿರುತ್ತದೆ.

3. ಜಾರಿಕಾರರು:

ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಆಧಾರದ ಮೇಲೆ 1 ಹುದ್ದೆಗೆ 25 ಅಭ್ಯರ್ಥಿಗಳಂತೆ (1:25 ರ ಅನುಪಾತದಲ್ಲಿ) ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಹುದ್ದೆಗಳಿಗೆ ಅನುಗುಣವಾಗಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಟಿಪ್ಪಣಿ: ಸಂದರ್ಶನವು 10 ಅಂಕಗಳನ್ನು ಒಳಗೊಂಡಿರುತ್ತದೆ.

4. ಸೇವಕರು :

ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಆಧಾರದ ಮೇಲೆ 1 ಹುದ್ದೆಗೆ 10 ಅಭ್ಯರ್ಥಿಗಳಂತೆ (1:10 ರ ಅನುಪಾತದಲ್ಲಿ) ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಹುದ್ದೆಗಳಿಗೆ ಅನುಗುಣವಾಗಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಟಿಪ್ಪಣಿ : ಸಂದರ್ಶನವು 10 ಅಂಕಗಳನ್ನು ಒಳಗೊಂಡಿರುತ್ತದೆ.

ಅಭ್ಯರ್ಥಿಗಳನ್ನು 2 ವರ್ಷಗಳ ಕಾಲ ಪರೀಕ್ಷಣಾ ಅವಧಿಯಲ್ಲಿಡಲಾಗುವುದು.

ಲಗತ್ತಿಸಬೇಕಾದ ದಾಖಲಾತಿಗಳು :

ಅಭ್ಯರ್ಥಿಗಳು ಈ ಕೆಳಕಂಡ ಪ್ರಮಾಣಪತ್ರಗಳ ಒಂದೊಂದು ಫೋಟೋ ಪ್ರತಿಗಳನ್ನು (Xerox Copy) ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು. ಕೊನೆಯ ದಿನಾಂಕದ ನಂತರ ಸಲ್ಲಿಸಲಾದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

1. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಅಂಕಪಟ್ಟಿಗಳು ಹಾಗೂ ಪ್ರಮಾಣಪತ್ರಗಳು.
2. ಜನ್ಮದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣಪತ್ರ, / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ
3. ಸೈನಿಕ ಸೇವೆಯಿಂದ ಬಿಡುಗಡೆಯಾದ /ಮುಕ್ತಿಹೊಂದಿದ ಬಗ್ಗೆ ಪ್ರಮಾಣಪತ್ರ. (ಮಾಜಿಸೈನಿಕ ಮೀಸಲಾತಿ ಕೋರಿದ್ದಲ್ಲಿ)
4. ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡ ನಮೂನೆ –ಡಿ ಯಲ್ಲಿ, ಪ್ರವರ್ಗ–1 ರ ಅಭ್ಯರ್ಥಿಗಳು ನಮೂನೆ–ಇ ಯಲ್ಲಿ ಮತ್ತು 2–ಎ, 2–ಬಿ, 3–ಎ, 3–ಬಿ ಅಭ್ಯರ್ಥಿಗಳು ನಮೂನೆ ಎಫ್ ರಲ್ಲಿ ಸಂಬಂಧಿಸಿದ ತಹಸೀಲ್ದಾರರಿಂದ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಪಡೆದು ಲಗತ್ತಿಸಬೇಕು.

5. ಶಾಲಾ ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರ ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ಎರಡು ನಡತೆ ಪ್ರಮಾಣ ಪತ್ರಗಳು.

6. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/96/ಸೇನನಿ/2005ದ ದಿನಾಂಕ: 10.08.2005 ರ ಪ್ರಕಾರ ನಿಗದಿತ ನಮೂನೆ–2 ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಅದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿ ಸಲ್ಲಿಸಬೇಕು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

7. ಗ್ರಾಮೀಣ ಮೀಸಲಾತಿಯನ್ನು ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರಮಾಣಪತ್ರ ನಮೂನೆ–2 ರ ಜೊತೆ ನಮೂನೆ–1 ರಲ್ಲೂ ದೃಢೀಕರಣ ಪತ್ರವನ್ನು ಸಲ್ಲಿಸುವುದು.

8. ಕನ್ನಡ ಮಾಧ್ಯಮ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣಪತ್ರವನ್ನು ಪಡೆದು ಸಲ್ಲಿಸುವುದು.

9. ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣಪತ್ರವನ್ನು ದಿ:19.11.2005 ರ ಅಧಿಕೃತ ಜ್ಞಾಪನಾ ಸಂಖ್ಯೆ:ಸಿಆಸುಇ/115/ಸೇನನಿ/2005 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ತಹಸೀಲ್ದಾರರಿಂದ ಪ್ರಮಾಣಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

10. ವಾಹನ ಚಾಲನೆಯ ರಹದಾರಿ (ಆದೇಶ ಜಾರಿಕಾರರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮಾತ್ರ).

11. ವಿಧವೆಯರು, ಜೀತ ಕಾರ್ಮಿಕರು ಹಾಗೂ ವಯೋಮಿತಿ ರಿಯಾಯಿತಿಗೆ ಅರ್ಹರಾದ ಇನ್ನಿತರರು ವಯೋಮಿತಿ ರಿಯಾಯಿತಿ ಕೋರಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರವನ್ನು ಸಲ್ಲಿಸುವುದು.

ಪ್ರಮುಖವಾದ ಸೂಚನೆಗಳು:

ಈ ಕೆಳಗಿನ ಸಂಧರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಆಯಾ ಅಭ್ಯರ್ಥಿಗಳಿಗೆ ನಮೂದಿಸಿರುವ ಮಟ್ಟಿಗೆ ಹೆಚ್ಚಿಸಲಾಗುವುದು.

12. ಅರ್ಹತಾ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.

13. ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವರು ಎಷ್ಟು ವರ್ಷಗಳ ಅವಧಿಗೆ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ, ಎರಡರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ಸಡಿಲಿಕೆಯನ್ನು ನೀಡಲಾಗುವುದು.

14. ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ, ಅವನು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ 03 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುವೋ ಅಷ್ಟು ವರ್ಷಗಳು.

15. ಅಭ್ಯರ್ಥಿಯು ಅಂಗವಿಕಲನಾಗಿದ್ದಲ್ಲಿ, ವಿಧವೆಯಾಗಿದ್ದಲ್ಲಿ ಮತ್ತು ಜೀತ ಕಾರ್ಮಿಕನಾಗಿದ್ದಲ್ಲಿ 10 ವರ್ಷಗಳು.

16. ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅಭ್ಯರ್ಥಿಯು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸೇವೆ ಸಲ್ಲಿಸಿದ್ದಾರೋ ಅಷ್ಟು ವರ್ಷಗಳ ಅಥವಾ 05 ವರ್ಷಗಳ ಅವಧಿ, ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

17. ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಮೇಲಾಧಿಕಾರಿಗಳಿಂದ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

18. ಅಭ್ಯರ್ಥಿಯು ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನಲ್ಲಿ ಪೂರ್ಣಕಾಲಿಕ ಪರೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂತಹ ಕೆಡೆಟ್ ಪರೀಕ್ಷಕನಾಗಿ ಸೇವೆ ಸಲ್ಲಿಸಿದ್ದಷ್ಟು ವರ್ಷಗಳು.

19. ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ನೇಮಕಗೊಂಡು ಗ್ರಾಮಸಮೂಹ ಪರಿಶೀಲಕರಾಗಿ ಈಗ ಕೆಲಸ ಮಾಡುತ್ತಿದ್ದರೆ ಅಥವಾ ಹಿಂದೆ ಇದ್ದ ಪಕ್ಷದಲ್ಲಿ ಅಂತಹ ಗ್ರಾಮ ಸಮೂಹ ಪರಿಶೀಲಕರಾಗಿ ಸೇವೆ ಸಲ್ಲಿಸಿದ್ದಷ್ಟು ವರ್ಷಗಳು.

ಇತರೆ ಸೂಚನೆಗಳು:

20. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

21. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸುವವರು ಪ್ರತಿ ಹುದ್ದೆಗಳಿಗೂ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

22. ಅರ್ಜಿಯಲ್ಲಿ ಮತ್ತು ಲಕೋಟೆಯ ಮೇಲೆ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

23. ಅರ್ಜಿಯೊಂದಿಗೆ 5 ರೂಪಾಯಿ ಅಂಚೆ ಚೀಟಿ (Postal Stamp) ವನ್ನು ಹೊಂದಿರುವ ಸ್ವ–ವಿಳಾಸದ ಲಕೋಟೆಯನ್ನು ಸಲ್ಲಿಸತಕ್ಕದ್ದು.

24. ಅರ್ಜಿಯೊಂದಿಗೆ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಒಂದು ಭಾವಚಿತ್ರವನ್ನು ಸ್ವದೃಢಿಕರಿಸಿ ಲಗತ್ತಿಸಬೇಕು.

25. ಸಂದರ್ಶನ ಪತ್ರ ಬರೆದಿರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಲ್ಲವೆಂದು ಭಾವಿಸಿಕೊಳ್ಳತಕ್ಕದ್ದು.

26. ಆಯ್ಕೆಯ ಸಂಬಂಧವಾಗಿ ಸಂದರ್ಶನಕ್ಕೆ ಅನರ್ಹರಾದ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಆಸ್ಪದವಿರುವುದಿಲ್ಲ.

ಬಿ.ಎ. ಪಾಟೀಲ್,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಅರ್ಜಿ ನಮೂನೆ

ಸ್ವದೃಢೀಕರಿಸಿದ
ಪಾಸ್‌ಪೋರ್ಟ್
ಅಳತೆಯ ಭಾವಚಿತ್ರವನ್ನು
ಅಂಟಿಸಬೇಕು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು – ಇವರಿಗೆ

ಮಾನ್ಯರೇ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧಿಸೂಚನೆ ಸಂಖ್ಯೆಃ 04/2011 ದಿನಾಂಕಃ 03–11–2011ರ ಪ್ರಕಾರ ನಾನು ಕೆಳಕಂಡ ಮಾಹಿತಿಗಳೊಂದಿಗೆ ಶೀಘ್ರಲಿಪಿಗಾರ/ಬೆರಳಚ್ಚುಗಾರ/ಬೆರಳಚ್ಚು ನಕಲುಗಾರ/ಜಾರಿಕಾರ/ಸೇವಕ ಹುದ್ದೆಗೆ ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

01	ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ)			
02	ತಂದೆ / ಗಂಡನ ಹೆಸರು			
03	ತಾಯಿಯ ಹೆಸರು			
04	ಜನ್ಮ ದಿನಾಂಕ			
05	ವಯಸ್ಸು (ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಯ ವಯಸ್ಸು)	ವರ್ಷಗಳು	ತಿಂಗಳುಗಳು	ದಿನಗಳು
06	ಅಭ್ಯರ್ಥಿಯ ಖಾಯಂ ವಿಳಾಸ ಮತ್ತು ದೂರವಾಣಿ ಸಂಖ್ಯೆ			
07	ಲಿಂಗ	ಪುರುಷ / ಮಹಿಳೆ		
08	ರಾಷ್ಟ್ರೀಯತೆ ಮತ್ತು ಧರ್ಮ			

09	ಜಾತಿ / ಉಪಜಾತಿ	
10	ವಿವಾಹಿತರಾದಲ್ಲಿ ಒಬ್ಬರಿಗಿಂತ ಹೆಚ್ಚು ಜೀವಂತ ಗಂಡ ಅಥವಾ ಹೆಂಡತಿ ಇದ್ದಾರೆಯೇ?	
11	ನೀವು ಯಾವುದಾದರೂ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿದ್ದೀರ?	
12	ನೀವು ಸರ್ಕಾರಿ ಸೇವೆಯಿಂದ ಅಥವಾ ಇನ್ನಾವುದಾದರೂ ಸೇವೆಯಿಂದ ವಜಾ ಆಗಿದ್ದೀರ ಅಥವಾ ತೆಗೆದುಹಾಕಲ್ಪಟ್ಟಿದ್ದೀರ?	

13	ಕೋರುವ ಮೀಸಲಾತಿಗಳು (ಕೋರುವ ಮೀಸಲಾತಿಯನ್ನು ✓ಚಿಹ್ನೆ ಹಾಕುವುದರ ಮೂಲಕ ಗುರುತಿಸಿ ಪ್ರಮಾಣಪತ್ರದ ಸ್ವಯಂ ದೃಢೀಕೃತ ನಕಲನ್ನು ಲಗತ್ತಿಸಬೇಕು)	ಸಾಮಾನ್ಯ	ಪ.ಜಾತಿ	ಪ.ಪಂಗಡ	ಪ್ರವರ್ಗ–1
		2–ಎ	2–ಬಿ	3–ಎ	3–ಬಿ

14	ನೀವು ಈ ಯಾವುದಾದರೂ ಮೀಸಲಾತಿ ಅಡಿಯಲ್ಲಿ ಬರುತ್ತೀರ? (ಸೇರುವ ಮೀಸಲಾತಿಯನ್ನು ✓ಚಿಹ್ನೆ ಹಾಕುವುದರ ಮೂಲಕ ಗುರುತಿಸಿ ಪ್ರಮಾಣಪತ್ರದ ಸ್ವಯಂ ದೃಢೀಕೃತ ನಕಲನ್ನು ಲಗತ್ತಿಸಬೇಕು)	ಗ್ರಾಮೀಣ	ಕ.ಮಾ.ಅ.	ಮಾ.ಸೈ.	ಅಂ.ಅ.	ಯೋ.ನಿ.ಅ.

15	ಶೈಕ್ಷಣಿಕ ವಿದ್ಯಾರ್ಹತೆ (ಅನ್ವಯಿಸುವ ವಿದ್ಯಾರ್ಹತೆಯ ಅಂಕಣಗಳನ್ನು ಮಾತ್ರ ಭರ್ತಿ ಮಾಡುವುದು) (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)	ಉತ್ತೀರ್ಣ ಹೊಂದಿದ ವರ್ಷ	ಗರಿಷ್ಠ ಅಂಕಗಳು	ಗಳಿಸಿದ ಅಂಕಗಳು	ಶೇಕಡಾ ವಾರು ಅಂಕಗಳು
	7ನೇ ತರಗತಿ				
	ಎಸ್‌ಎಸ್‌ಎಲ್‌ಸಿ				
	ಕನ್ನಡ ಬೆರಳಚ್ಚು (ಕಿರಿಯ ಶ್ರೇಣಿ)				
	ಆಂಗ್ಲ ಬೆರಳಚ್ಚು (ಕಿರಿಯ ಶ್ರೇಣಿ)				
	ಕನ್ನಡ ಬೆರಳಚ್ಚು (ಹಿರಿಯ ಶ್ರೇಣಿ)				
	ಆಂಗ್ಲ ಬೆರಳಚ್ಚು (ಹಿರಿಯ ಶ್ರೇಣಿ)				
	ಕನ್ನಡ ಶೀಘ್ರಲಿಪಿ (ಹಿರಿಯ ಶ್ರೇಣಿ)				
	ಆಂಗ್ಲ ಶೀಘ್ರಲಿಪಿ (ಹಿರಿಯ ಶ್ರೇಣಿ)				
	ಇತರೆ ಯಾವುದೇ ವಿದ್ಯಾರ್ಹತೆ				

ಸೂಚನೆ:– ಅಭ್ಯರ್ಥಿಗಳು ಎಲ್ಲಾ ಕಾಲಂಗಳನ್ನು ಖಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

: ಘೋಷಣೆ :

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ಸತ್ಯವಾಗಿದ್ದು ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ತಾವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಬದ್ಧನಾಗಿರುತ್ತೇನೆ / ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡ ಪಕ್ಷದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿರುತ್ತೇನೆ / ಸಿದ್ಧಳಿರುತ್ತೇನೆ.

ಸ್ಥಳ :

ದಿನಾಂಕ : **ಅಭ್ಯರ್ಥಿಯ ಸಹಿ.**

ಪಿ.ಆರ್. 336

ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ಇ(2) 4993/2011–12/ಪಿಎಸ್‌ಸಿ, ಬೆಂಗಳೂರು, ದಿನಾಂಕ: 05.11.2011.

ಉಲ್ಲೇಖ : 1. ಆಯೋಗದ ಅಧಿಸೂಚನೆ ಸಂಖ್ಯೆ:ಇ(3)1714/2010–11/ಪಿಎಸ್‌ಸಿ, ದಿನಾಂಕ:02–02–2011.

2. ಆಯೋಗದ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಇ(2)3166/2011–12/ಪಿಎಸ್‌ಸಿ, ದಿ:21.09.2011

3. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆಯ ಪತ್ರ ಸಂಖ್ಯೆ:ಸಿಬ್ಬಂದಿ 1/ಸಿಆರ್ 129/2005–06, ದಿ:28.09.2011

4. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997.

ಸಹಾಯಕರು/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, 18 ಇಲಾಖೆಗಳಿಂದ ಸ್ವೀಕೃತವಾದ ಬೇಡಿಕೆ ಪತ್ರಗಳನ್ವಯ ನಮೂನೆ–06ರಲ್ಲಿ ಕೋರಿದಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆಯೋಗವು ಉಲ್ಲೇಖಿತ–02ರ ಅಧಿಸೂಚನೆಯಲ್ಲಿನ ಅನುಬಂಧ–01ರಲ್ಲಿ ಹುದ್ದೆಗಳ ವಿವರವನ್ನು ಪ್ರಕಟಿಸಲಾಗಿತ್ತು.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಇವರು ಉಲ್ಲೇಖ–3ರ ತಮ್ಮ ಪತ್ರದಲ್ಲಿ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 7ರನ್ವಯ ಹಿಂದೂಯೇತರ ಅಧಿಕಾರಿ ನೌಕರರನ್ನು ತಮ್ಮ ಇಲಾಖೆಗೆ ನೇಮಕಾತಿ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸುತ್ತಾ, ಈಗಾಗಲೇ ತಾವು ವರ್ಗೀಕರಣದಲ್ಲಿ ಪ್ರವರ್ಗ–2ಬಿ ಮೀಸಲಾತಿಗೆ ಗುರುತಿಸಲಾದ ಹುದ್ದೆಯನ್ನು ಸಾಮಾನ್ಯ ಅರ್ಹತೆ(ಇತರೆ) ಮೀಸಲಾತಿಗೆ ಗುರುತಿಸಬೇಕೆಂದು ಕೋರಿದ್ದರ ಹಿನ್ನೆಲೆಯಲ್ಲಿ ಉಲ್ಲೇಖ–4ರ ನಿಯಮದಂತೆ ಕೆಳಕಂಡಂತೆ ಮರುವರ್ಗೀಕರಿಸಿದ್ದು, ವರ್ಗೀಕರಣವನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ.

1) ಧಾರ್ಮಿಕ ದತ್ತಿ ಇಲಾಖೆ, ಹುದ್ದೆಗಳ ಸಂಖ್ಯೆ–13

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ.ಜಾ	01	01	–	–	–	–	–	02
ಪ.ಪಂ	01	–	–	–	–	–	–	01
ಪ್ರವರ್ಗ–1	01	–	–	–	–	–	–	01
ಪ್ರ–2(ಎ)	01	01	–	–	–	–	–	02
ಪ್ರ–2(ಬಿ)	–	–	–	–	–	–	–	–
ಪ್ರ–3(ಎ)	–	–	–	–	–	–	–	–
ಪ್ರ–3(ಬಿ)	–	–	–	–	–	–	–	–
ಸಾ.ಅ	02	02	02	–	–	–	01*	07
ಒಟ್ಟು	06	04	02	–	–	–	01	13

*– ಅಂಧ/ದೃಷ್ಟಿಮಾಂದ್ಯ ಅಂಗವಿಕಲ ಅಭ್ಯರ್ಥಿಗಳು

ಡಾ|| ಡಿ.ಎಸ್.ವಿಶ್ವನಾಥ್,
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 330

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–01.

ಅಧಿಸೂಚನೆ

ಸಂಖ್ಯೆ: ಇ(2)4981/2011–12/ಪಿಎಸ್‌ಸಿ, ದಿನಾಂಕ:01–10–2011

ವಿಷಯ : ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪನಿರೀಕ್ಷಕರ 101 ಹುದ್ದೆಗಳಲ್ಲಿ ಕಾಯ್ದಿರಿಸಲಾಗಿದ್ದ ಒಂದು ಪ.ಜಾ/ಮಹಿಳಾ ಮೀಸಲಾತಿಯ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: ಇ(3)831/2009–10/ಪಿಎಸ್‌ಸಿ, ದಿನಾಂಕ:04–08–2009.

2) ಅಧಿಸೂಚನೆ ಸಂಖ್ಯೆ: ಇ(2) 868/2010–11/ಪಿಎಸ್‌ಸಿ, ದಿನಾಂಕ:17–03–2011.

ಕರ್ನಾಟಕ ಲೋಕಸೇವಾ ಆಯೋಗವು ಉಲ್ಲೇಖ–(1)ರ ಅಧಿಸೂಚನೆಯಲ್ಲಿ ಅಬಕಾರಿ ಇಲಾಖೆಯಲ್ಲಿನ 101 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ನಂತರ ನಿಯಮಗಳಲ್ಲಿ ನಿರ್ದಿಷ್ಟ ಪಡಿಸಿರುವಂತೆ 1:5ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಯಿಂದ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ನಂತರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನಾಧರಿಸಿ ಉಲ್ಲೇಖ–2ರಲ್ಲಿನ ಅಧಿಸೂಚನೆಯಲ್ಲಿ 100 ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಮುಂದಿನ ಕ್ರಮಕ್ಕೆ ಅಬಕಾರಿ ಆಯುಕ್ತರಿಗೆ ಕಳುಹಿಸಿ ಕೊಡಲಾಯಿತು.

ಆದರೆ ಪ.ಜಾ/ಮಹಿಳಾ ಮೀಸಲಾತಿಯ ಒಂದು ಹುದ್ದೆಯನ್ನು ಅರ್ಹ ಅಭ್ಯರ್ಥಿಯ ವೈದ್ಯಕೀಯ ಕಾರಣದ ಮೇರೆಗೆ ಭರ್ತಿ ಮಾಡಿರಲಿಲ್ಲ. ಸದರಿ ಒಂದು ಹುದ್ದೆಗೆ ಜೇಷ್ಠತೆಯಲ್ಲಿ ಅರ್ಹರಿರುವ ಶ್ರೀಮತಿ ಸುಧಾರಾಣಿ .ಎ. (ನೋಂ.ಸಂ. 504101) ಇವರನ್ನು ಆಯ್ಕೆ ಮಾಡಲಾಗಿದ್ದು, ಶ್ರೀಮತಿ ಸುಧಾರಾಣಿ .ಎ. ಇವರ ಜೇಷ್ಠತೆಯು ದಿನಾಂಕ:17–03–2011ರ ಅಂತಿಮ ಆಯ್ಕೆ ಪಟ್ಟಿಯ ಕ್ರ.ಸಂ. 97ರ ಅಭ್ಯರ್ಥಿ ಶ್ರೀ ಪರಮೇಶ ಕುಮಾರ .ವಿ. (ನೋಂ.ಸಂ. 300045) ಮತ್ತು ಕ್ರ.ಸಂ. 98ರ ಅಭ್ಯರ್ಥಿ ಶ್ರೀ ವಿಠಲ್ ಪಿರಗಣ್ಣವರ್ (ನೋಂ.ಸಂ.100014) ಇವರುಗಳ ಮಧ್ಯೆ ನಿಗದಿಪಡಿಸಲಾಗಿರುತ್ತದೆ ಎಂದು ಪ್ರಕಟಿಸಲಾಗಿದೆ. ಶ್ರೀಮತಿ ಸುಧಾರಾಣಿ .ಎ. ಇವರ ಮೀಸಲಾತಿ ಇತ್ಯಾದಿ ವಿವರಗಳು ಈ ಕೆಳಗಿನಂತಿವೆ.

SL.NO.	NAME OF THE CANDIDATE	REG NO.	DOB	RESERVATION	MARKS
1.	SUDHA RANI .A. DOOR NO 475 B BLOCK JALAPURI POLICE QUARTERS MYSORE-570019	504101	22-08-1987	SC/W	103.00

ಟಿಪ್ಪಣಿ:– ಮೇಲ್ಕಂಡ ಅಭ್ಯರ್ಥಿಯ ಆಯ್ಕೆಯು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:7225/10 ಮತ್ತು 86/11ರ ತೀರ್ಪಿಗೆ ಬದ್ಧವಾಗಿರುತ್ತದೆ.

ಡಾ॥ ಡಿ.ಎಸ್.ವಿಶ್ವನಾಥ್,
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 331

ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ
ಅಧಿಸೂಚನೆ ಸಂಖ್ಯೆ: ADMN-I/02/2011, ದಿನಾಂಕ: 16–11–2011.

ವಿಷಯ : ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಬೆರಳಚ್ಚು–ನಕಲುಗಾರರು ಮತ್ತು ಜವಾನರ ಹುದ್ದೆಗಳ ನೇಮಕಾತಿ ಬಗ್ಗೆ.

ಓದಲಾಗಿದೆ:
1. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-I/220/96, ದಿನಾಂಕ: 08–03–2010.
2. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA- II/164/2009, ದಿನಾಂಕ: 18–03–2010.
3. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA- II/36/2003, ದಿನಾಂಕ: 23–06–2011.
4. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA- II/54/2011, ದಿನಾಂಕ: 01–10–2011.

ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉಡುಪಿ ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರು, ಬೆರಳಚ್ಚುಗಾರರು ಬೆರಳಚ್ಚು–ನಕಲುಗಾರು ಮತ್ತು ಜವಾನರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ದಿನಾಂಕ: 16–11–2011ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17–12–2011, ಸಂಜೆ 5–00 ಘಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ:–ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಉಡುಪಿ ಜಿಲ್ಲೆ, ಉಡುಪಿ.

ಭಾಗ: 1

1. ಶೀಘ್ರಲಿಪಿಗಾರ ಹುದ್ದೆ: (Stenographers)

ಹುದ್ದೆಗಳ ಸಂಖ್ಯೆ: 15.

ವೇತನ ಶ್ರೇಣಿ:– 7275–175–7800–200–8600–225–9500–250–10500–300–12300– 350– 13350 ಇತರ ಭತ್ಯೆಗಳೊಂದಿಗೆ.

ಹುದ್ದೆಗಳ ವರ್ಗೀಕರಣ:–

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಅಂ.ಅ	ಮಾ.ಸೈ	ಒಟ್ಟು
ಪ. ಜಾತಿ	–	–	01 (Backlog)	01	–	02
ಪ್ರ – II A	–	01	01	01	–	03
ಪ್ರ – III A	01	–	–	–	–	01
ಪ್ರ – III B	01	–	–	–	–	01
ಸಾಮಾನ್ಯ	02	02	03	–	01	08
ಒಟ್ಟು	04	03	05	02	01	15

ಶೈಕ್ಷಣಿಕ ವಿದ್ಯಾರ್ಹತೆ:–

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಹಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು. ಅಥವಾ

(3) ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟೇರಿಯಲ್ ಪ್ರ್ಯಾಕ್ಟೀಸ್ ಪಠ್ಯಕ್ರಮದ ಡಿಪ್ಲೊಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

ಆಯ್ಕೆ ವಿಧಾನ:–

ಮೇಲೆ ಹೇಳಿದ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು ನಿಮಿಷ ಒಂದಕ್ಕೆ 120 ಪದಗಳ ವೇಗದಲ್ಲಿ 5 ನಿಮಿಷಗಳ ಉಕ್ತಲೇಖನವನ್ನು ತೆಗೆದುಕೊಂಡು, ಉಕ್ತಲೇಖನವನ್ನು 45 ನಿಮಿಷಗಳಲ್ಲಿ ಅನುಲಿಪಿ ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

2. ಬೆರಳಚ್ಚುಗಾರ: (Typist) :

ಹುದ್ದೆಗಳ ಸಂಖ್ಯೆ : 02

ವೇತನ ಶ್ರೇಣಿ:– 5800–100–6000–125–6500–150–7100–175–7800–200–8600–225–9500–250–10500 – ಇತರ ಭತ್ಯೆಗಳೊಂದಿಗೆ.

ಹುದ್ದೆಗಳ ವರ್ಗೀಕರಣ:–

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಕ. ಮಾಧ್ಯಮ	ಒಟ್ಟು
ಪ. ಜಾತಿ	–	01	–	–	01
ಸಾಮಾನ್ಯ	–	–	–	01	01
ಒಟ್ಟು	–	**01**	–	**01**	**02**

ಶೈಕ್ಷಣಿಕ ವಿದ್ಯಾರ್ಹತೆ:–

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಹಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ಪರೀಕ್ಷೆಗಳಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಆಯ್ಕೆ ವಿಧಾನ:–

ಮೇಲೆ ಹೇಳಿದ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು 15 ನಿಮಿಷಗಳ ಉಕ್ತಲೇಖನದಲ್ಲಿ ಕೊಡುವ ವಿಷಯವನ್ನು ಬೆರಳಚ್ಚು ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಅಯ್ಕೆ ಮಾಡಲಾಗುವುದು.

3. ಬೆರಳಚ್ಚು–ನಕಲುಗಾರ: (Typist-Copyist):

ಹುದ್ದೆಗಳ ಸಂಖ್ಯೆ : 02

ವೇತನ ಶ್ರೇಣಿ:– 5800–100–6000–125–6500–150–7100–175–7800–200–8600–225–9500–250–10500 – ಇತರ ಭತ್ಯೆಗಳೊಂದಿಗೆ.

ಹುದ್ದೆಗಳ ವರ್ಗೀಕರಣ:–

ಮೀಸಲಾತಿ	**ಇತರೆ**	**ಮಹಿಳೆ**	**ಗ್ರಾಮೀಣ**	**ಅಂ.ಅ**	**ಒಟ್ಟು**
ಪ. ಜಾತಿ	–	–	–	01	01
ಸಾಮಾನ್ಯ	01	–	–	–	01
ಒಟ್ಟು	**01**	–	–	**01**	**02**

ಶೈಕ್ಷಣಿಕ ವಿದ್ಯಾರ್ಹತೆ:–

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

ಆಯ್ಕೆ ವಿಧಾನ:–

ಮೇಲೆ ಹೇಳಿದ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು 15 ನಿಮಿಷಗಳ ಉಕ್ತಲೇಖನದಲ್ಲಿ ಕೊಡುವ ವಿಷಯವನ್ನು ಬೆರಳಚ್ಚು ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಅಯ್ಕೆ ಮಾಡಲಾಗುವುದು.

4. ಜವಾನ (Peon):

ಹುದ್ದೆಗಳ ಸಂಖ್ಯೆ : 06

ವೇತನ ಶ್ರೇಣಿ:– 4800–100–6000–125–6500–150–7100–175–7275.

ಹುದ್ದೆಗಳ ವರ್ಗೀಕರಣ:–

